# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1158 |
| ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 13.03.2026. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 97 ಜಿಪಿಕೆ 2023(ಇ), ಬೆಂಗಳೂರು. ದಿನಾಂಕ:15.07.2023 ರಂತೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಪಿ.ಡಿ.ಓ ರವರನ್ನು ಅಮಾನತ್ತು ಮಾಡಿರುವ ಆದೇಶಗಳನ್ನು ರದ್ದುಗೊಳಿಸಿ, ದಿನಾಂಕ:13.03.2024ರ ಅಧಿಸೂಚನೆಯ ಪ್ರಕಾರ ಈ ವೃಂದ ನೇಮಕಾತಿ ಪ್ರಾಧಿಕಾರಿಯಾದ ಆಯುಕ್ತರು ಪಂಚಾಯತ್ ರಾಜ್ ಆಯುಕ್ತಾಲಯ ಮಾತ್ರ ಅಮಾನತ್ತುಗೊಳಿಸಲು ಸಕ್ಷಮ ಪ್ರಾಧಿಕಾರ ಎಂದು ಕೆ.ಎ.ಟಿ ತೀರ್ಪು ನೀಡಿದರೂ ಸಹ, ಪುನ: ದಿನಾಂಕ:15.07.2023ರ ಆದೇಶವನ್ನು ಉಲ್ಲೇಖಿಸಿ ಪಿ.ಡಿ.ಓ ರವರನ್ನು ಅಮಾನತ್ತು ಮಾಡುವ ಸಕ್ಷಮ ಪ್ರಾಧಿಕಾರ ಮುಖ್ಯ ಕಾರ್ಯನಿರ್ವಾಹಕರ ಅಧಿಕಾರಿಗಳೆಂದು ಸೂಚನೆ ನೀಡುವುದು, ಕೆ.ಎ.ಟಿ. ತಿರ್ಪುಗಳ ಉಲ್ಲಂಘನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | 1) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 10 (8) (2) (ಎ)ರಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅವರ ಕಾರ್ಯವ್ಯಾಪ್ತಿಯಲ್ಲಿರುವ ಜಿಲ್ಲೆಯ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸಿವಿಲ್ ಸೇವೆಗೆ ಸೇರಿದ ಯಾವುದೇ ಇಲಾಖೆಯ (ಕರ್ನಾಟಕ ನ್ಯಾಯಾಂಗ ಇಲಾಖೆಯನ್ನು ಹೊರತುಪಡಿಸಿ) ಸಮೂಹ ಸಿ ಮತ್ತು ಡಿ ನೌಕರರನ್ನು ಅಮಾನತ್ತುಗೊಳಿಸುವ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.<br><br>2)ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 10 (1) ರನ್ವಯ, ನೇಮಕ ಪ್ರಾಧಿಕಾರಿಯು ಅಥವಾ ಅವನು ಯಾವ ಪ್ರಾಧಿಕಾರಿಗೆ ಅಧೀನನಾಗಿರುವನೋ ಆ ಯಾರೇ ಪ್ರಾಧಿಕಾರಿಯು ಅಥವಾ ಈ ಬಗ್ಗೆ ಸರ್ಕಾರದಿಂದ ಅಧಿಕಾರ ಪಡೆದ ಇತರ ಯಾರೇ ಪ್ರಾಧಿಕಾರಿಯು ಸರ್ಕಾರಿ ನೌಕರನನ್ನು ಈ ನಿಯಮದ ಅಡಿಯಲ್ಲಿ ತಿಳಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಅಮಾನತ್ತಿನಲ್ಲಿಡಲು ಅವಕಾಶವಿರುತ್ತದೆ.<br><br>3)ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 97 ಜಿಪಿಕೆ 2023 (ಇ) ಬೆಂಗಳೂರು, ದಿನಾಂಕ:15.07.2023 ರನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತು ಮಾಡುವ ಪ್ರಾಧಿಕಾರವಾಗಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನೂ ಸಹ ಸರ್ಕಾರದಿಂದ ನಿಗದಿಪಡಿಸಿ ಆದೇಶಿಸಲಾಗಿದೆ.<br><br>ಮೇಲೆ ತಿಳಿಸಿದ ನಿಯಮಗಳು ಮತ್ತು ಆದೇಶದ ಹಿನ್ನೆಲೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಅಮಾನತ್ತು ಮಾಡಲು |

| | | |
|---|---|---|
| | | ಅವಕಾಶವಿರುತ್ತದೆ.<br><br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರವರು ಮಾಡಿರುವ ಅಮಾನತ್ತು ಆದೇಶದ ವಿರುದ್ಧವಾಗಿ ಬಾಧಿತರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ 561/2025 ಮತ್ತು ಅರ್ಜಿ ಸಂಖ್ಯೆ: 885/2024ರ ಪ್ರಕರಣಗಳಲ್ಲಿ ಮಾನ್ಯ ಆಡಳಿತ ನ್ಯಾಯ ಮಂಡಳಿಯು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾಡಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಅಮಾನತ್ತು ಆದೇಶದ ಪರವಾಗಿ ತೀರ್ಪನ್ನು ನೀಡಿರುತ್ತದೆ. |
| (ಆ) | ಈ ಮೇಲಿನ ಕೆ.ಎ.ಟಿ ಪ್ರಕರಣಗಳಿಗೆ ಪಂಚಾಯತ್ ರಾಜ್ ಆಯುಕ್ತಾಲಯದಿಂದ ಕೆ.ಎ.ಟಿ. ಸಲ್ಲಿಸಿದ ಪ್ರತ್ಯುತ್ತರ ಹೇಳಿಕೆಯ(ಖ (ಖಚುಟಥಿ ಖಾಚಿಣಣ) ಪ್ರತಿ ನೀಡುವುದು ಹಾಗೂ ಈ ತೀರ್ಪುಗಳ ಮೇಲೆ ಪಂಚಾಯತ್ ರಾಜ್ ಆಯುಕ್ತಾಲಯವು ಕೈಗೊಂಡ ಕ್ರಮದ ವಿವರ ನೀಡುವುದು; ಅಮಾನತ್ತುಗೊಂಡ ಪಿ.ಡಿ.ಓ ರವರ ಅಮಾನತ್ತು ತೆರವುಗೊಳಿಸುವ ಮತ್ತು ಇವರಿಗೆ ಸ್ಥಳ ನಿಯುಕ್ತಿ ಮಾಡುವ ಸಕ್ಷಮ ಪ್ರಾಧಿಕಾರದ ವಿವರ ಒದಗಿಸುವುದು ಹಾಗೂ ಸರ್ಕಾರ ಈ ಬಗ್ಗೆ ಹೊರಡಿಸಿದ ಅಧಿಸೂಚನೆ ಪ್ರತಿ ಒದಗಿಸುವುದು; | 1) ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊರಡಿಸಿರುವ ಅಮಾನತ್ತು ಆದೇಶಗಳ ವಿರುದ್ಧದ ನ್ಯಾಯಾಲಯ ಪ್ರಕರಣಗಳಲ್ಲಿ ಪಂಚಾಯತ್ ರಾಜ್ ಆಯುಕ್ತಾಲಯದ ಪರವಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿಯೇ ಪ್ರತ್ಯುತ್ತರ ಹೇಳಿಕೆಗಳನ್ನು ನೀಡಲು ಕ್ರಮ ವಹಿಸಲಾಗುತ್ತಿದೆ.<br><br>2) ಅಮಾನತ್ತು ಮಾಡಲು ಅಧಿಕಾರವಿರುವ ಸಕ್ಷಮ ಪ್ರಾಧಿಕಾರ ಮತ್ತು ಮೇಲ್ಪಟ್ಟದ ಪ್ರಾಧಿಕಾರಗಳು ಸದರಿ ನೌಕರರ ಅಮಾನತ್ತನ್ನು ತೆರವುಗೊಳಿಸ ಬಹುದಾಗಿರುತ್ತದೆ. ನೇಮಕಾತಿ ಪ್ರಾಧಿಕಾರದ ಹಂತದಲ್ಲಿ ಅಮಾನತ್ತುಗೊಂಡ ನೌಕರರ ಸ್ಥಳ ನಿಯುಕ್ತಿಗೊಳಿಸಲು ಅವಕಾಶವಿರುತ್ತದೆ.<br><br>3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಅಮಾನತ್ತು ತೆರವುಗೊಳಿಸಿದ ಪ್ರಕರಣಗಳಲ್ಲಿ ಸ್ಥಳ ನಿಯುಕ್ತಿಗಾಗಿ ನೇಮಕಾತಿ ಪ್ರಾಧಿಕಾರವಾದ ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ರವರಿಗೆ ಜಿಲ್ಲಾ ಪಂಚಾಯತಿಯಿಂದ ಪ್ರಸ್ತಾವನೆ ಸಲ್ಲಿಸಬೇಕಾಗಿರುತ್ತದೆ. |
| ಇ) | ಒಂದು ವೃಂದಕ್ಕೆ ಎಷ್ಟು ನೇಮಕಾತಿ ಪ್ರಾಧಿಕಾರ ಇರುತ್ತದೆ; ಸಿ.ಸಿ.ಎ-1957ರ ನಿಯಮಗಳ ಅನುಸೂಚಿ-2 ಪ್ರಕಾರ ಪಿ.ಡಿ.ಓ ಹುದ್ದೆ ನೇಮಕಾತಿ ಪ್ರಾಧಿಕಾರ ಯಾರು ಹಾಗೂ ದಿನಾಂಕ:13.03.2024ರ ವೃಂದ ಮತ್ತು ನೇಮಕಾತಿ ಅಧಿಸೂಚನೆ ಪ್ರಕಾರ ಪಿ.ಡಿ.ಓ ಹುದ್ದೆ ನೇಮಕಾತಿ ಪ್ರಾಧಿಕಾರದ ವಿವರ ಒದಗಿಸುವುದು; | ಪ್ರತಿ ವೃಂದಕ್ಕೆ ಒಂದು ನೇಮಕಾತಿ ಪ್ರಾಧಿಕಾರವಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: RDPR/313/GPK/2022(E) ದಿನಾಂಕ: 13.03.2024 ರಂತೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ನೇಮಕಾತಿ ಪ್ರಾಧಿಕಾರ ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ ಆಗಿರುತ್ತಾರೆ. ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ಅನುಸೂಚಿ - 2 ಕ್ಕೆ ತಿದ್ದುಪಡಿ ತರುವ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

| | | |
|---|---|---|
| ಈ) | ಸರ್ಕಾರದ ಪತ್ರ ಸಂಖ್ಯೆ ಗ್ರಾಅಪ 29 ಜಿಪಿಎನ್ 2025 ದಿನಾಂಕ:21.02.2025ರಲ್ಲಿ ಪಿ.ಡಿ.ಓ ವೃಂದಕ್ಕೆ ಆಯುಕ್ತಾಲಯದ ಆಯುಕ್ತರು, ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ ಹಾಗೂ ಈ ವೃಂದದ ನೌಕರರನ್ನು ಅಮಾನತ್ತುಗೊಳಿಸುವ ಸಕ್ಷಮ ಪ್ರಾಧಿಕಾರ ಎಂದು ತಿಳಿಸಿದ್ದರೂ ಸಹ ಈ ಆದೇಶದ ವಿರುದ್ಧ ಜಿಲ್ಲೆಗಳಿಂದ ಬಂದ ಎಷ್ಟು ಶಿಸ್ತು ಪ್ರಸ್ತಾವನೆಗಳ ಮೇಲೆ ಕ್ರಮವಹಿಸದೇ ಆಯುಕ್ತಾಲಯದಿಂದ ಜಿಲ್ಲಾ ಪಂಚಾಯತಿಗಳಿಗೆ ವಾಪಸ್ಸು ಕಳುಹಿಸಲಾಗಿದೆ. ಪಿ.ಡಿ.ಓರವರನ್ನು ಆಯುಕ್ತರು ಅಮಾನತ್ತುಗೊಳಿಸಲು ಕ್ರಮ ವಹಿಸದೇ ಇರುವುದಕ್ಕೆ ಕಾರಣಗಳೇನು: | ಕರ್ನಾಟಕ ಸಿವಿಲ್ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 10-(8) (2) (ಎ), ನಿಯಮ 10 (1) ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 97 ಜಿಪಿಕೆ 2023 (ಇ) ಬೆಂಗಳೂರು, ದಿನಾಂಕ:15.07.2023 ರನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತು ಮಾಡಲು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವಿರುತ್ತದೆ. ಅದರನ್ವಯ ಜಿಲ್ಲಾ ಪಂಚಾಯತಿಗಳ ಹಂತದಲ್ಲಿ ಕ್ರಮ ವಹಿಸಲು ನಿರ್ದೇಶನ ನೀಡಲಾಗಿರುತ್ತದೆ.<br><br>ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಹಂತದಲ್ಲಿ ಸಹ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿರುತ್ತದೆ. |
| ಉ) | ಆಯುಕ್ತಾಲಯ ಪತ್ರ ದಿನಾಂಕ:17.02.2026ರಲ್ಲಿ ದುರ್ನಡತೆ ತೋರಿದ ಪಿ.ಡಿ.ಓ ರವರನ್ನು ಈಗಾಗಲೇ ಸರ್ಕಾರವು ಅಧಿಕೃತ ಜ್ಞಾಪನ ದಿನಾಂಕ:16.01.2026 ರಂದು ಅಧೀಕ್ಷಕರು. ಬೈಲಗೊಂಗಲ ತಾಲ್ಲೂಕು ಪಂಚಾಯತ್ ಬೆಳಗಾವಿ ಜಿಲ್ಲೆಗೆ ವರ್ಗಾಯಿಸಲಾಗಿದೆ. ಇವರನ್ನು ಪ್ರಸ್ತುತ ಅಮಾನತ್ತುಗೊಳಿಸುವ ಹಾಗೂ ಇವರ ಮೇಲೆ ಜುಲ್ಮಾನೆಗಳನ್ನು ಯಾರು ವಿಧಿಸಬೇಕು: ಈ ರೀತಿಯ ಪ್ರಕರಣಗಳಲ್ಲಿ ಕೈಗೊಳ್ಳಬೇಕಾದ ಕ್ರಮದ ಕುರಿತು ಸರ್ಕಾರ ಹೊರಡಿಸಿದ ಅಧಿಸೂಚನೆಯ ಪ್ರತಿ ಒದಗಿಸುವುದು. | ಈ ನೌಕರರು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಆಗಿರುವುದರಿಂದ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 97 ಜಿಪಿಕೆ 2023 (ಇ) ಬೆಂಗಳೂರು, ದಿನಾಂಕ: 15.07.2023 ರಲ್ಲಿ ತಿಳಿಸಿರುವ ಪ್ರಾಧಿಕಾರಗಳು ಅಮಾನತ್ತು ಮಾಡಲು ಹಾಗೂ ದಂಡನೆ ವಿಧಿಸಲು ಅವಕಾಶವಿರುತ್ತದೆ.<br><br>ಈ ಆದೇಶದನ್ವಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು 1957ರ ನಿಯಮ 8 ರಲ್ಲಿ ತಿಳಿಸಿರುವ (ii) ರಿಂದ (iv-ಎ) ವರೆಗಿನ ಲಘು ದಂಡನೆಗಳನ್ನು ವಿಧಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಹಾಗೂ (v) ರಿಂದ (viii) ರ ವರೆಗಿನ ಕಠಿಣ ದಂಡನೆಗಳನ್ನು ವಿಧಿಸಲು ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ರವರು ಪ್ರಾಧಿಕಾರವಾಗಿರುತ್ತಾರೆ.<br><br>ದಿನಾಂಕ:15.07.2023ರ ಸರ್ಕಾರದ ಆದೇಶವನ್ನು ಅನುಬಂಧದಲ್ಲಿ ನೀಡಿದೆ. |

ಸಂಖ್ಯೆ: ಗ್ರಾಅಪ 238 ಗ್ರಾಪಂಅ 2026

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಸೇವಾ ವಿಷಯಗಳ ನಿರ್ವಹಣೆ ಮತ್ತು ಶಿಸ್ತು ಪ್ರಾಧಿಕಾರವು ದಂಡನೆಗಳನ್ನು ವಿಧಿಸುವ ಬಗ್ಗೆ.- ಆದೇಶ.

ಓದಲಾಗಿದೆ:ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 313 ಜಿಪಿಕೆ 2022(2) (ಇ), ದಿನಾಂಕ:29.03.2023.

**ಪ್ರಸ್ತಾವನೆ.**

ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ಷೆಡ್ಯೂಲ್ II ಕ್ಕೆ ತಿದ್ದುಪಡಿ ತರುವುದನ್ನು ಬಾಕಿಯಿರಿಸಿ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು, ರಾಜ್ಯ ವೃಂದವನ್ನಾಗಿ ಪರಿಗಣಿಸಿ ಸರ್ಕಾರವನ್ನು, ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವನ್ನಾಗಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು, ರಾಜ್ಯ ವೃಂದವನ್ನಾಗಿ ಪರಿಗಣಿಸಿ ಆಯುಕ್ತರು, ಪಂಚಾಯತ್ ರಾಜ್ ರವರನ್ನು, ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರವನ್ನಾಗಿ ನೇಮಿಸಿ ಆದೇಶಿಸಿದೆ.

ಪ್ರಸ್ತುತ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರ ವಿರುದ್ಧದ ಶಿಸ್ತು ಪ್ರಕರಣ, ಇಲಾಖಾ ವಿಚಾರಣಾ ಪ್ರಕರಣಗಳು, ಕಾಲಬದ್ಧ ವೇತನ ಬಡ್ತಿ, ಮಂಜೂರಾತಿ, ಪರಿವೀಕ್ಷಾರ್ಥ ಅವಧಿ ಘೋಷಣೆ ಮತ್ತು ಇನ್ನಿತರ ಸೇವಾ ವಿಷಯಗಳ ಕುರಿತು ಸರ್ಕಾರ/ಆಯುಕ್ತಾಲಯಕ್ಕೆ ಪ್ರಸ್ತಾವನೆ ಸಲ್ಲಿಸುವ ಕುರಿತು ಸ್ಪಷ್ಟೀಕರಣ ಕೋರುತ್ತಿರುತ್ತಾರೆ.

ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಶಿಸ್ತು ಪ್ರಾಧಿಕಾರವು ಲಘು ಮತ್ತು ಕಠಿಣ ದಂಡನೆಗಳನ್ನು ವಿಧಿಸಲು, ಕಾಲಬದ್ಧ ವೇತನ ಬಡ್ತಿ, ಮಂಜೂರಾತಿ, ಪರಿವೀಕ್ಷಾರ್ಥ ಅವಧಿ ಘೋಷಣೆ ಮತ್ತು ಸೇವಾ ವಿಷಯಗಳ ನಿರ್ವಹಣೆ ಮಾಡುವ ಬಗ್ಗೆ, ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಲು ಸರ್ಕಾರವು ನಿರ್ಧರಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 97 ಜಿಪಿಕ 2023 (ಇ),</u>**
**<u>ಬೆಂಗಳೂರು ದಿನಾಂಕ:15-07-2023.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳಿಗೆ ಶಿಸ್ತು ಪ್ರಾಧಿಕಾರವು ಲಘು ಮತ್ತು ಕಠಿಣ ದಂಡನೆಗಳನ್ನು ವಿಧಿಸಲು, ಕಾಲಬದ್ಧ ವೇತನ ಬಡ್ತಿ ಮಂಜೂರಾತಿ, ಪರೀಕ್ಷಾರ್ಥ ಅವಧಿ ಘೋಷಣೆ ಮತ್ತು ಸೇವಾ ವಿಷಯಗಳ ನಿರ್ವಹಣೆ ಮಾಡಲು ಈ ಕೆಳಕಂಡಂತೆ ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಿ ಸರ್ಕಾರವು ಆದೇಶಿಸಿದೆ.

| ಹುದ್ದೆಗಳ ವರ್ಗ | ನೇಮಕ ಮಾಡುವ ಅಧಿಕಾರವುಳ್ಳ ಪ್ರಾಧಿಕಾರಿ | ಪರೀಕ್ಷಾರ್ಥ ಅವಧಿ ಘೋಷಣೆ ಮಾಡುವ ಪ್ರಾಧಿಕಾರ | ಕಾಲಬದ್ಧ ವೇತನ ಬಡ್ತಿ ಮಂಜೂರು ಮಾಡುವ ಪ್ರಾಧಿಕಾರ | ಅಮಾನತ್ತು ಮಾಡುವ ಪ್ರಾಧಿಕಾರ | ದಂಡನೆಗಳನ್ನು ವಿಧಿಸುವ ಅಧಿಕಾರವುಳ್ಳ ಪ್ರಾಧಿಕಾರ ಮತ್ತು ಅವರು ವಿಧಿಸಬಹುದಾದ ದಂಡನೆಗಳು | | |
|---|---|---|---|---|---|---|---|
| | | | | | ಪ್ರಾಧಿಕಾರಿ | ದಂಡನೆಗಳು | ಅಪೀಲು ಪ್ರಾಧಿಕಾರ |
| 1 | 2 | 3 | 4 | 5 | 6 | 7 | 8 |
| ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ | ಸರ್ಕಾರ | - | ಸರ್ಕಾರ | ಆಯುಕ್ತರು, ಪಂಚಾಯತ್ ರಾಜ್ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | (ii) ರಿಂದ (iv-a) | ಆಯುಕ್ತರು, ಪಂಚಾಯತ್ ರಾಜ್ |
| | | | | | ಸರ್ಕಾರ | (v) ರಿಂದ (viii) | - |
| ಪಂಚಾಯತಿ ಅಭಿವೃದ್ಧಿ ಅಧಿಕಾರಿ | ಆಯುಕ್ತರು, ಪಂಚಾಯತ್ ರಾಜ್ | ಆಯುಕ್ತರು, ಪಂಚಾಯತ್ ರಾಜ್ | ಆಯುಕ್ತರು, ಪಂಚಾಯತ್ ರಾಜ್ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ | (ii) ರಿಂದ (iv-a) | ಆಯುಕ್ತರು, ಪಂಚಾಯತ್ ರಾಜ್ |
| | | | | | ಆಯುಕ್ತರು, ಪಂಚಾಯತ್ ರಾಜ್ | (v) ರಿಂದ (viii) | ಸರ್ಕಾರ |

ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸೇವಾ ವಹಿಗಳನ್ನು ವೇತನ ಬಟವಾಡೆ ಅಧಿಕಾರಿಯಾದ ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ನಿರ್ವಹಿಸತಕ್ಕದ್ದು.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ನಿರ್ವಹಿಸತಕ್ಕದ್ದು.

ಹಿರಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಹಂತದಲ್ಲಿ ನಿರ್ವಹಿಸತಕ್ಕದ್ದು.

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957ರ ನಿಯಮ 7-ಎ ರನ್ವಯ ಗ್ರೇಡ್-1 ಗ್ರಾಮ ಪಂಚಾಯತಿ ಕಾರ್ಯದರ್ಶಿ ವೃಂದದ ರಾಜ್ಯ ಮಟ್ಟದ ಅಂತಿಮ ಜೇಷ್ಠತಾ ಪಟ್ಟಿಯನ್ನು ಆಯುಕ್ತರು, ಪಂಚಾಯತ್ ರಾಜ್ ರವರು ಪ್ರಕಟಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ಮುಂಬಡ್ತಿ ಕೋಟಾದ ಖಾಲಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕ್ರಮ ವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಹಮ್ಮದ್ [illegible] ಎಂ.)
ನಿರ್ದೇಶಕರು(ಪಂ.ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ಮಾರ್ಗ, ಕೆಂಪೇಗೌಡ ರಸ್ತೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
4. ಉಪಕಾರ್ಯದರ್ಶಿಗಳು (ಅಭಿವೃದ್ಧಿ), ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
5. ಉಪಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ/ ಕಂಪ್ಯೂಟರ್ ಸೆಲ್.

**ಪ್ರತಿ ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ರವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು.